No. M. 1550.
"KODAGU" MERCARA, (Coorg).

ಕೊಡಗು

ಸಂಪಾದಕರು:-ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೩-೮-೦.

ಸಂಪುಟ ೨೮ | ತಾರೀಕು ೧೭—೧೧—೧೯೪೪ನೇ ಶುಕ್ರವಾರ. | ಸಂಚಿಕೆ ೨೫

ಹೊಸ ಅಸ್ತ್ರ-'ರಾಕೆಟ್ ವಿ-2'

ಯೂರೋಪು ರಣರಂಗದಲ್ಲಿಯು ವು ಭಯಂಕರವಾಗಿ ನಡೆಯುತ್ತಿ ಮೆಟ್ಸ್‌ನ ಉತ್ತರದಲ್ಲಿ ತೀಪ್ರಕ ನವಾಗುತ್ತಿದೆ. ಮೊಸೆಲೆಯ ಹತ್ತಿ ಜರ್ಮನರು ಅಮೇರಿಕನ್ ದಳಗಳ ನ್ನ ಎರಡು ಮೈಲುಗಳಷ್ಟು ಹಿಮ್ಮೆ ಟ್ಟಿಸಿರುವರು. ಜರ್ಮನರು ದಿನ ಕ ದಂತೆ ಬಹು ಪ್ರತಾಪದಿಂದ ಕಾದು ತ್ತಿದ್ದಾರೆ. ಜರ್ಮನರು ತಮ್ಮ ಮೈ ಕೊನಿಕರಲ್ಲನ ಪ್ರೇತವಿಮಾನಗಳನ್ನು ಪ್ರಯೋಗಿಸಿ ಇಡೀ ಜಗತ್ತನ್ನೇ ಬೆರ ಗುಗೊಳಿಸಿದರು. ಈ ವಿಮಾನಗಳನ್ನು 'ವಿ. 1' ಎಂಬುದಾಗಿ ಕರೆಯುತ್ತಾರೆ. ಇದನ್ನು ರೂಪಾಂತರಿಸಿ ಹೆಚ್ಚು ವೇಗ ದ ಮತ್ತು ನಿಶ್ಚಿತ ಗುರಿಯನ್ನು ಮುಟ್ಟಬಲ್ಲ ವಿಮಾನಗಳನ್ನು ತಯಾರಿಸಿದ್ದಾ ರೆಂದು ಈ ಮೊದಲು ಬರೆದಿದ್ದೆನು. ಮೊನ್ನೆಯಾಗಿ ಬ್ರಿಟಿಷ್ ಪ್ರಧಾನ ಮಂ ತ್ರಿ ಚರ್ಚಿಲ್ಲರು ಪಾರ್ಲಿಮೆಂಟನಲ್ಲಿ ಈ ವಿಮಾನಗಳ(ಇವುಗಳನ್ನು ರಾಕೆಟ್ 'ವಿ 2' ಎನ್ನುತ್ತಾರೆ) ವಿಚಾರ ಸ್ವಲ್ಪವಿವರ ಹೇಳಿಕೊಟ್ಟಿರುವರು. ಈ ವಿಮಾನಗಳನ್ನು ಜರ್ಮನರು ಉಪಯೋಗಿಸುತ್ತಿರುವ ರಂತೆ. ಈ ವಿಮಾನಗಳು ಬಹು ದೊ ಡ್ಡವಿದ್ದು ಹದಿನಾಲ್ಕು ಟನ್ನು ಭಾರದ ಬಾಂಬುಗಳನ್ನು ಸಾಗಿಸಬಲ್ಲುವಂತೆ. ಇವುಗಳನ್ನು ಇನ್ನೂ ಸುಧಾರಿಸಿ 80 ಟನ್ನು ಭಾರದ ಸ್ಫೋಟಕ ವಸ್ತುಗಳ ನ್ನು ಸಾಗಿಸುವ ಮತ್ತು 3000 ಮೈ ಲು ದೂರದ ಸ್ಥಳದ ಮೇಲೆ ಗುರಿ ತ ಪ್ಪದೆ ಹೊಡೆಯುವ ಏರ್ಪಾಡೂ ಮಾ ಡಬಹುದೆಂದು ಹೇಳುತ್ತಾರೆ. ಇವುಗಳ ವೇಗ ಶಬ್ದಕ್ಕಿಂತಲೂ ಮಿಗಿ ಲು. ವಿಮಾನದಿಂದ ಹೊರಡುವ ಶ ಬ್ದವನ್ನು ಹಿಂದೆ ಹಾಕಿ 60 ಮೈಲು ಮುಂದೆ ಹೋಗುತ್ತಿರುತ್ತದಂತೆ. ಒಂ ದು ಸ್ಥಳದಿಂದ ವಿಮಾನದ ಶಬ್ದ ನಮ ಗೆ ಕೇಳಿಬಂದರೆ ವಿಮಾನವು ಶಬ್ದಬರು ವಲ್ಲಿ ಇರದೆ 60 ಮೈಲು ಮುಂದೆ ಇ ರುತ್ತದೆ. ಇವರ ವೇಗವು ಗಂಟೆಗೆ 3000 ಮೈಲುಗಳು ಎಂದು ಹೇಳಲಾ ಗುತ್ತಿದೆ. ಮಿಂಚಿನ ವೇಗವಿರುವ ಬ ಗರುವ ಈ ವಿಮಾನಗಳನ್ನು ಪ್ರತಿಭಟ ಸುವದು ಅತಿ ಪ್ರಯಾಸದ ಕೆಲಸವಾಗಿ ಪರಿಣಮಿಸಿದೆ. ಹಿಂದಿನಂತೆ ವಿಮಾನ ಗಳು ಬಾಂಬುಹಾಕಲು ಬಂದಿವೆಯೆಂ ದು ನಗರದ ಜನರಿಗೆ ಎಚ್ಚರ ಕೊಡ ಲು ಸಹ ಇದರಿಂದ ಸಾಧ್ಯವಿಲ್ಲ. ಈ 'ವಿ. 2' ವಿನ ಶಬ್ದವು ಮುಟ್ಟುವದಕ್ಕೆ ಮೊದಲೇ ವಿಮಾನವು ಬಂದು ಧಾಳಿ ಮಾಡಿರುತ್ತದೆ. ಆದ್ದರಿಂದ ಚರ್ಚಿಲ್ಲ ರು, ಮುಂದೆ ಈ ವಿಮಾನ ಧಾಳಿಯ ಸ ಮಯದಲ್ಲಿ ಎಚ್ಚರಿಕೆ ಕೊಡುವದಾಗು ವದಿಲ್ಲವೆಂದಿದ್ದಾರೆ. ಜರ್ಮನರ ಈ 'ವಿ. 2' ವಿಮಾನಗಳ ಪ್ರಯೋಗವು ಹೆ ಚ್ಚುತ್ತಿದೆಯಂತೆ. ಈ ವಿಮಾನಗಳ ನ್ನು ಸಾಕಷ್ಟು ಪ್ರಮಾಣದಲ್ಲಿ ತಯಾ ರಿಸಿ ಉಪಯೋಗಿಸುವದು ಸಾಧ್ಯವಾ ದರೆ ಜಗತ್ತಿನ ಯಾವದೇ ಒಂದು ಮೂ ಲೆಯಲ್ಲಿ ಕೂತು ಸಾವಿರಾರು ಮೈಲು ದೂರದ ನಗರಗಳನ್ನು ನಾಶಮಾಡುವ ದನ್ನು ಜರ್ಮನರು ಕಂಡುಕೊಳ್ಳಬ ಹುದು. ಕಳೆದ ಅನೇಕ ತಿಂಗಳುಗ ಳಿಂದ ಈ ವಿಮಾನಗಳನ್ನು ಜರ್ಮನರು ಉಪಯೋಗಿಸುತ್ತಿದ್ದರೂ ಅದರ ವರ್ತಮಾನವು ಈ ವರೆಗೆ ಎಲ್ಲಿಯೂ ಪ್ರಕಟವಾಗಿರಲಿಲ್ಲ. ಚರ್ಚಿಲ್ಲರ ಭಾ ಷಣದ ಮೂಲಕ ಈ ವಿಚಾರವು ತಿಳಿ ದುಬಂತು.

ಈ ಮಧ್ಯೆ ಅಂದರೆ ತಾ. 12 ರಲ್ಲಿ ಬ್ರಿಟಿಷ್ ಪ್ರಧಾನಿಗಳಾದ ಚರ್ಚಿಲ್ಲರ ವರು ಮತ್ತೊಂದು ಕಡೆ ಭಾಷಣ ಮಾ ಡುತ್ತಾ 'ಜರ್ಮನರನ್ನು ಮುಂದಿನ ಕೆ ರುತಿಂಗಳುಗಳಲ್ಲಿ ಸೋಲಿಸುವವು' ಎಂ ದಿರುವರು. ಈ ಮಾತಿನಂತೆ 1945 ನೇ ಮೇ ತಿಂಗಳೊಳಗೆ ಜರ್ಮನರನ್ನು ಸೋಲಿಸಲಾಗುವದೆಂದಾಯಿತು. ಆದ ರೆ ಈ ಆರುತಿಂಗಳುಗಳಲ್ಲಿ ಸೋಲುವ ಷ್ಟು ಜರ್ಮನರ ಶಕ್ತಿ ಹ್ರಾಸವಾಗಿದೆ ಯೆಂದು ನನಗನಿಸುವದಿಲ್ಲ. ಸ್ಟಾಲಿನಿನ ಲೆಕ್ಕದಂತೆ ಪೂರ್ವಗಡಿಯಲ್ಲಿ ಜರ್ಮ ನರ 240 ಸೈನ್ಯಡಿವಿಜನುಗಳಿವೆ. ಪಶ್ಚಿ ಮದಲ್ಲಿ ಸಾಕಷ್ಟು ದಳದಿಂದ ಮಿತ್ರರ ನ್ನು ಯೋಗ್ಯರೀತಿ ಪ್ರತಿಭಟಿಸುತ್ತಿರು ವರು. ಮೇಲಣಗಿ ಅವರ ಗುಪ್ತಾಸ್ತ್ರ ಗಳು ಒಂದೊಂದಾಗಿ ಹೊರಬರುತ್ತಿವೆ. ಇನ್ನೂ ಯಾವುವು ಇವೆಯೋ ತಿಳಿದು ಬಂದಿರುವದಿಲ್ಲ. ಜರ್ಮನಿಯು ಹಿಡಿ ತದಲ್ಲಿ ಇನ್ನೂ ಯೂರೋಪಿನ ಬಹು ಭಾಗವಿದೆ. ಹೀಗಿರುವಾಗ ಇನ್ನು ಬ ರುವ ಆರುತಿಂಗಳುಗಳಲ್ಲಿ ಇದನ್ನೆಲ್ಲಾ ಪು ನರ್ವಶಮಾಡಿಕೊಂಡು ಜರ್ಮನರ ಬೆ ನ್ನುಮೂಳೆ ಮುರಿಯುವೆನೆನ್ನುವ ಚ ರ್ಚಿಲ್ಲರ ಮಾತು ಜಂಭದ ಮಾತಲ್ಲದಿ ದ್ದರೂ ಸ್ವಲ್ಪ ಸಾಹಸದ ಮಾತೆ!

ಈ ಮಧ್ಯೆ ಜರ್ಮನರು ಅಮೇರಿ ಕದ ಮೇಲೂ ಹಾರಾಡುವ ಬಾಂಬುಗ ಳನ್ನು ಅಂದರೆ 'ವಿ. 2'ನ್ನು ಉಪ ಯೋಗಿಸಬಹುದೆಂದು ಅಧಿಕಾರಯು ತವಾಗಿ ತಿಳಿಸಲ್ಪಟ್ಟಿದೆ. 'ಫ್ರಾನ್ಸ್ ಕ ಡೆಯಿಂದ ಈ ಬಾಂಬುಗಳು ಬರುತ್ತಿ ವೆ; ಅವನ್ನು ಪ್ರಯೋಗಿಸುವ ಸ್ಥಳಗಳ ನ್ನು ಹಿಡಿದುಕೊಂಡರೆ ಅದರ ಹಾವಳಿ ತಪ್ಪುವದೆ'ಂದು ಮಿತ್ರರು ತಿಳಿದು ಫ್ರಾ ನ್ಸ್ ಕರಾವಳಿಯ ಭಾಗಗಳನ್ನು ಬಹು ಪ್ರಯಾಸದಿಂದ ವಶಪಡಿಸಿಕೊಂಡರು. ಆದರೂ ಲಂಡನಿನ ಮೇಲಿನ ಈ ಪ್ರೇ ತವಿಮಾಗಳ ಧಾಳಿ ತಪ್ಪಲಿಲ್ಲ ಈ ಬಾಂಬುಗಳನ್ನು ಸಮುದ್ರ ಜಲಂ ತರ್ಗಾಮಿಗಳಲ್ಲಿಂದ ಮತ್ತು ಆಕಾಶದ ವಿಮಾನಗಳಿಂದ ಹಾರಿಸುವದೂ ಸಾ ಧ್ಯವಾಗಿದೆಯೆಂದು ಇತ್ತಲಾಗಿ ತಿಳಿ ಯಬಂದಿದೆ. ಆದ್ದರಿಂದ ಈ ಪ್ರೇತ ವಿಮಾನಗಳ ಉಪದ್ರ ನಿಲ್ಲಬೇಕಾದರೆ ಆಕಾಶದ, ಸಮುದ್ರದ, ನೆಲದ ಪೂ ರ್ಣ ಸ್ವಾಮಿತ್ವಬೇಕು. ಅಂದರೆ ಜ ರ್ಮನರ ಪೂರ್ಣ ಪರಾಜಯವಾಗ ಬೇಕು. ಅಷ್ಟರ ವರೆಗೆ ಅವರು ಈ ಕಿರುಕುಳವನ್ನು ಕೊಡದೆ ಇರಲಾರರು.

ತಾ. 12 ರಲ್ಲಿ ಹಿಟ್ಲರನು ಒಂದು ಜಾಹೀರಾತನ್ನು ಹೊರಡಿಸುತ್ತಾ, 'ನಾನು ಜೀವಂತವಿರುವ ವರೆಗೆ ಜರ್ಮ ನಿಯು ಯೂರೋಪಿನ ಇತರ ಜನಾಂ ಗಗಳ ಸ್ಥಿತಿಯನ್ನು ಪಡೆಯುದು. ಯಾ ವ ವರೆಗೆ ನನ್ನ ಶರೀರದಲ್ಲಿ ಉಸಿರು ಇ ರುತ್ತದೋ ಆ ವರೆಗೆ ಜರ್ಮನಿಯ ಅ ಭಿವೃದ್ಧಿಗಾಗಿ, ನನ್ನ ಜನತೆಯನ್ನು ಶ ಕ್ತಿವಂತರನ್ನಾಗಿ ಮಾಡುವದಕ್ಕಾಗಿ ಈ ಶರೀರವನ್ನು ಮುಡಿಪಾಗಿಡುವೆನು. ಈ ಯುದ್ಧವನ್ನು ಜಯದ ಕೊನೆಗೆ ಮುಟ್ಟಿಸುವದು ನನ್ನ ಧ್ಯೇಯ. ಆ ದ್ದರಿಂದ ಮಾತುಗಳಿಂದ ಹೆಚ್ಚಿನ ಪ್ರ ಯೋಜನವಿಲ್ಲ. ಉಚ್ಚ ಜರ್ಮನನಂ ತೆ ನನ್ನ ಜವಾಬ್ದಾರಿಯನ್ನು ನನ್ನ ಜೀವನ ಮತ್ತು ಶರೀರದ ಪರಿವೆಯಿಲ್ಲದೆ ನಿರ್ವಹಿಸುವೆನು' ಎಂದಿದ್ದಾನೆ. ಇ ದೇ ಸಂದರ್ಭದಲ್ಲಿ ಜರ್ಮನಿಯ ಪ್ರ ಚಾರ ಮಂತ್ರಿ ಗೇಬಲ್ಸನು ಒಂದು ಭಾಷಣದಲ್ಲಿ, 'ಇಡೀ ಜಗತ್ತು ಜರ್ಮ ನಿಯನ್ನು ಹತ್ತಿಕ್ಕಲು ಮೊದಲಿದ್ದಂತೆ ಅದನ್ನು ಕತ್ತರಿಸಿ ಕುಗ್ಗಿಸಲು ಒಳಸಂ ಚು ಮಾಡಿವೆ. ಶತ್ರುಗಳ ಗದರಿಕೆಗೆ ಶಸ್ತ್ರಕೆಳಗಿಡುವವರು ನಾವಲ್ಲ. ಮುಂ ದೆ ಬರುವ ಮೂರು ತಿಂಗಳುಗಳಲ್ಲಿ ನಾವು ಅಸಂಖ್ಯಾತವಾದ ಸೈನ್ಯಡಿವಿಜ ನುಗಳನ್ನು ರಣರಂಗಕ್ಕೆ ಕಳುಹಿಸುವೆ ವು. ಈ ರೀತಿ ಧೀರ ಯೋಧರನ್ನು ತರಬೇತುಮಾಡಿ ಯೋಗ ಶಸ್ತ್ರ ಆ ಯುಧಗಳೊಡನೆ ರಣರಂಗಕ್ಕೆ ಕಳುಹಿ ಸುವದು ನನಗೊಂದು ಹೆಮ್ಮೆಯ ವಾ ತು. ಜರ್ಮನಿಯ ಗಡಿಯಲ್ಲಿ ಯಾವ ದೇ ಭಾಗದಲ್ಲಿ ಮಿತ್ರರು ಗಡಿಯನ್ನು ಮುರಿದು ಮುಂದೆ ನುಗ್ಗಿದರೂ ಅವರ ನ್ನು ಪ್ರತಿಭಟಿಸುವ ಕೆಚ್ಚೆದೆಯ ಹೊ ಸ ಸೇನೆಗಳು ತಯಾರಾಗಿವೆ' ಎಂದು ಹೇಳಿರುವನು. ಈ ಮಾತುಗಳು ಯು ದ್ಧವು ಆರುತಿಂಗಳಲ್ಲಿ ಮುಗಿಯದೆಂ ಬುದನ್ನು ಸೂಚಿಸುತ್ತಿವೆ.

ಇತ್ತ ಪೂರ್ವದಲ್ಲಿ ಚೀನಾದ ಪರಿ ಸ್ಥಿತಿ ಚಿಂತಾಜನಕವಾಗಿದೆ. ಎಸೋ ಸಿಯೇಟೆಡ್ ಪ್ರೆಸ್ಸಿನ ಸುದ್ದಿಗಾರರಾದ ಶ್ರೀ. ಎಂ. ನೆರೂರ್‌ಕರರು ವರದಿ ಮಾ ಡಿದ ಮೇರೆ ಕಳೆದ ಆರುತಿಂಗಳುಗಳಿಂ ದ ಚೀನೀಯರು ಬಹು ಅಪಜಯಗಳ ನ್ನು ಪಡೆದಿದ್ದಾರೆ. ಅನೇಕ ಪ್ರಾ ಮುಖ್ಯ ನಗರಗಳು, ವಿಮಾನ ನಿಲ್ದಾ ಣಗಳು ಶತ್ರುಗಳ ವಶವಾಗಿವೆ. ಈ ದರೋದಿಗೆ ಚೀನಾದ ರಾಜಕೀಯ ಸ ಮಸ್ಯೆಯಲ್ಲಿ ಭಿನ್ನಾಭಿಪ್ರಾಯವಾ ಅಂತರಿಕ ಅವ್ಯವಸ್ಥೆಯೂ ತಲೆದೋ ದೆ. ಅಮೇರಿಕಾದಿಂದ ಕಳುಹಿಸುವ ಸಹಾಯ ಸಾಧನಗಳನ್ನು ಅಲ್ಲಿರುವ ಅಮೇರಿಕನ್ ದಳಗಳಿಗೇ ಹೆಚ್ಚಾಗಿ ಯ ಲ್ಲಿಯ ಜನರಲರಾಗಿದ್ದ ಸ್ಟಿಲ್‌ವೆಲ್ಲರ ಒದಗಿಸಿಕೊಡುತ್ತಿದ್ದರೆಂದೂ, ಆದ್ದರಿ ದ ಚೀನೀ ಸೇನೆಗಳಿಗೆ ಸಾಕಷ್ಟು ಸ ಧನ ಸಾಮಗ್ರಿಗಳು ದೊರೆಯತ್ತಿಲ್ಲವೆ ದೂ ಚೀನಿಯರ ವಾದ ಒಂದೆಡೆಯ ದರೆ ಮತ್ತೊಂದೆಡೆ ಚಿಯಾಂಗರು ಮ್ಮ ಅಧಿಕಾರವನ್ನು ಉಳಿಸಿಕೊಳ್ಳುವ ನ್ನು ಯೋಚಿಸುತ್ತಿರುವರೇ ವಿನಹ ಸಾನರನ್ನು ಹೊಡೆದೋಡಿಸಲು ಯ ತ್ನಿಸುವದಿಲ್ಲವೆಂದೂ, ಚೀನಾದಲ್ಲಿರು ಕಮ್ಯೂನಿಸ್ಟ್ ಪಕ್ಷಕ್ಕೆ ಸಹಾಯವನ್ನ ಕೊಡದೆ ಯುದ್ಧ ಸಲಕರಣೆಗಳನ್ನ ತಾವೇ ತೆಗೆದುಕೊಳ್ಳಬೇಕೆಂದು ಮತ್ತೊಂದೆಡೆ ಅಮೇರಿಕನರ ವಾ ಪ್ರಾರಂಭವಾಯಿತು. ತತ್ಪರಿಣಾ ವಾಗಿ ಸ್ಟಿಲ್‌ವೆಲ್ಲರನ್ನು ಕರೆಕಳುಹಿ ದ್ದು ವಾಚಕರಿಗೆ ತಿಳಿಯದಲ್ಲ. ಗೆ ಚೀನದಲ್ಲಿ ಒಡಕು ಹುಟ್ಟಿರು ನ್ನು ಉಪಯೋಗಿಸಿಕೊಂಡು ಒಪ್ಪ ಮಾಡಿಕೊಳ್ಳಲು ಜಪಾನು ಪ್ರಯ ಮಾಡುತ್ತಿದೆಯೆಂದು ವರದಿಯಿದೆ.

(3ನೇ ಪುಟ ನೋಡಿ)

ಕೊ ಡ ಗು

ತಾ. ೧೭-೧೧-೧೯ಳಳನೇ ಶುಕ್ರವಾರ

ದನಗಳ ದೊಡ್ಡ ರೋಗ.

ದನಗಳ ಖಾಯಿಲೆಯಿಂದಾಗಿ ಕೊಡಗಿನಲ್ಲಿ ಈ ವರ್ಷ ಹತ್ತು ಸಾವಿರಕ್ಕೆ ಕಡಿಮೆಯಿಲ್ಲದೆ ದನಗಳು ನಾಶವಾಗಿವೆ. ಅಂದರೆ ಕೊಡಗಿಗೆ ಏಳೆಂಟು ಲಕ್ಷ ರೂಪಾಯಿಗಳ ನಷ್ಟವಾಗಿದೆ. ಇದು ಪ್ರತ್ಯಕ್ಷವಾದ ನಷ್ಟವಾದರೆ ದನಗಳ ಅಭಾವದಿಂದ ಸರಿಯಾಗಿ ವ್ಯವಸಾಯಮಾಡಲಾರದೆ ಕೊಡಗಿನಲ್ಲಿ ಸಾವಿರಾರು ಎಕರೆಗಳಷ್ಟು ಭೂಮಿ ಪಾಳುಬಿದ್ದು ಅದೊಂದು ಬೇರೆ ನಷ್ಟವಾಗಿದೆ. ಹೀಗೆ ದನಗಳ ಖಾಯಿಲೆಯು ಬಹುಮಟ್ಟಿಗೆ ಕೊಡಗು ದೇಶದ ಅಭಿವೃದ್ಧಿಯನ್ನು ತಡೆಗಟ್ಟಿದೆ. ಇಂಥಾ ಒಂದು ಖಾಯಿಲೆಯನ್ನು ಹತೋಟಿಗೆ ತರುವದು ಇಲ್ಲವೇ ನಾಶಪಡಿಸುವದು ಅತ್ಯಗತ್ಯವಾದ ಕೆಲಸವಾಗಿದೆ. ದನಗಳ ಈ ಖಾಯಿಲೆಯನ್ನು ಗುಣಪಡಿಸಲು ಈ ವರೆಗೆ ವೆಟರ್‌ನರಿ ಇಲಾಖೆಯವರು ಬಹು ಶ್ರಮವಹಿಸಿ ಕೆಲಸ ಮಾಡಿದ್ದಾರೆ. ನಾನಾ ಕಡೆಗಳಲ್ಲಿ ಜಾನುವಾರಗಳಿಗೆ ಖಾಯಿಲೆ ನಿರೋಧ ದಾಕುಗಳನ್ನು ಹಾಕಿದ್ದಾರೆ. ಈ ದಾಕು ಹಾಕುವ ಕಾರ್ಯದಿಂದ ಉಪಯೋಗವಾಗಿದೆಯೇ ಎಂಬ ಬಗ್ಗೆ ಭಿನ್ನಾಭಿಪ್ರಾಯವಿರುವಂತೆ ಕಂಡುಬರುತ್ತದೆ. 'ದಾಕು ಹಾಕಿದ್ದರಿಂದ ನನ್ನ ದನಗಳು ಸತ್ತವು' ಎಂಬ ಕೂಗು ನಮ್ಮ ಕಿವಿಗೆ ಯಾಕೆ? ಕೌನ್ಸಿಲು ಸಭೆಯ ವರೆಗೂ ಮುಟ್ಟಿದೆ. ದಾಕು ಹಾಕಲು ಇಲ್ಲಿ ಉಪಯೋಗಿಸಿದ 'ಸೀರಂ'ನ ಪರಿಣಾಮದಿಂದ ಹಾಗಾಗಲು ಕಾರಣವೆಂದು ಹಲವರನ್ನುತ್ತಾರೆ. ಹೇಗೂ ದನಗಳ ಈ ಖಾಯಿಲೆಯನ್ನು ನಿಲ್ಲಿಸಲು ದಾಕುಹಾಕುವ ತತ್ವಕ್ಕೆ ಯಾರ ವಿರೋಧವೂ ಇಲ್ಲ. ಆದರೆ ದಾಕು ಹಾಕುವದರಿಂದ ಜಾನುವಾರುಗಳು ಉಳಿಯುವಂತಾಗಬೇಕು. ಈ ಭರವಸೆ ಜನರಲ್ಲಿ ಹಬ್ಬುವಂತಾಗಬೇಕು. ಈ ಭರವಸೆ ಉಂಟಾದರೆ ಪ್ರತಿಯೊಬ್ಬನೂ ತಾನಾಗಿಯೇ ಬಂದು ನಿಶ್ಕರ್ಷಿಸಿದ ಫೀಜುಕೊಟ್ಟು ದಾಕು ಹಾಕಿಸಿಕೊಂಡು ಹೋಗುವನು.

ಕೊಡಗಿನಲ್ಲಿ ತಾ. 10-11-44 ರಿಂದ ಜಾರಿಗೆ ಬಂದಿರುವ ಕೊಡಗಿನಲ್ಲಿರುವ ಎಲ್ಲಾ ಜಾನುವಾರಗಳಿಗೆ ದೊಡ್ಡ ರೋಗದ ನಿವಾರಣೆಯ ದಾಕು ಹಾಕುವ ಯೋಜನೆಯು ಯೋಗ್ಯವಾದುದು. ಈ ದಾಕು ಹಾಕಲು ಅಡಿನ ವೇಕ್ಸಿನನ್ನು ಉಪಯೋಗಿಸುವದೆಂದು ತಿಳಿದುಬಂದಿದೆ. ಇದು ತೀವ್ರ ಫಲಕಾರಿಯೂಗುವದೆಂಬ ಭರವಸೆಯಿದೆ. ದೇಶೀಯರು ಸರಕಾರದ ಈ ಯೋಜನೆಯಲ್ಲಿ ಸಹಕರಿಸಿ ತಮ್ಮ ತಮ್ಮ ಜಾನುವಾರಗಳಿಗೆ ದಾಕು ಹಾಕಿಸಿಕೊಳ್ಳಬೇಕು. ಕೊಡಗು ನಾಡು ಈ ದನಗಳ ದೊಡ್ಡ ರೋಗದ ಉಪಟಳದಿಂದ ಬಹುವಾಗಿ ನೊಂದಿದೆ. ಅಸದಳವಾದ ಕಷ್ಟಪಡುತ್ತಿದೆ. ಈ ಕಷ್ಟದಿಂದ ಪಾರಾಗಬೇಕಾದುದು ಸರ್ವರ ಕರ್ತವ್ಯ.

ಈ ಯೋಜನೆಯು ಯಶಸ್ವಿಯಾಗಬೇಕಾದರೆ ಪ್ರತಿಯೊಬ್ಬನೂ ತನ್ನ ಪ್ರತಿಯೊಂದು ದನಕ್ಕೂ ದಾಕು ಹಾಕಿಸಿಕೊಳ್ಳಬೇಕು. ದಾಕು ಹಾಕಿಸಿಕೊಳ್ಳದೆ ಗ್ರಾಮದಲ್ಲಿ ಒಂದು ದನವಿದ್ದರೆ ಆ ಮೂಲಕ ರೋಗ ಹಬ್ಬಲೂಬಹುದು. ಆದ್ದರಿಂದ ಪ್ರತಿ ಒಬ್ಬನೂ ಈ ಬಗ್ಗೆ ಎಚ್ಚರ ತೆಗೆದುಕೊಳ್ಳಬೇಕು.

ದಾಕು ಹಾಕುವ ಸರ್ಜನರು ಮತ್ತು ಅವರ ಸಹಾಯಕರು ಪ್ರತಿ ಗ್ರಾಮಗಳಿಗೆ ಹೋಗಿ ಪ್ರತಿ ಗ್ರಾಮದ ಕೆಲಸವನ್ನು ಅಲ್ಲೇ ಒಂದೆರಡು ದಿನಗಳಿದ್ದು ಪೂರೈಸಿ ಬರಬೇಕು. ಹೀಗೆ ಮಾಡಿದರೆ ಮಾತ್ರ ಗ್ರಾಮದ ಎಲ್ಲಾ ದನಗಳೂ ದೊರೆಯಬಹುದು. ಇಂದಿನಂಥಾ ದನಗಳ ಖಾಯಿಲೆಯ ದುರ್ದೆಶೆಯ ಕಾಲದಲ್ಲಿ ಈ ಯೋಜನೆಯು ಉತ್ತಮವಾದುದು. ಆದರೆ ದಾಕು ಹಾಕುವದರಿಂದ ಜಾನುವಾರುಗಳು ಖಾಯಿಲೆಯಿಂದ ಬದುಕುವವು ಎಂಬುದನ್ನು ಪೂರ್ತಿ ಸಂಬಂಧಪಟ್ಟವರು ಶ್ರುತಪಡಿಸಬೇಕು. ಈ ನಂಬಿಕೆಯೊಂದು ಸ್ಥಾಪಿಸಲ್ಪಟ್ಟರೆ ಯೋಜನೆಯು ಜಯಪ್ರದವಾಗುವದರಲ್ಲಿ ಸಂಶಯವಿಲ್ಲ.

ಪ್ರತಿಯೊಬ್ಬನೂ ತನ್ನ ದನಗಳಿಗೆ ಖಡ್ಡಾಯವಾಗಿ ದಾಕು ಹಾಕಿಸಿಕೊಳ್ಳಬೇಕೆಂಬುದು ಸಮುದಾಯದ ಹಿತದ ದೃಷ್ಟಿಯಿಂದಾಗಿದೆ. ಆದರೆ ದನ ಒಂದಕ್ಕೆ 2 ಆಣೆ ಮತ್ತು ಕರ ಒಂದಕ್ಕೆ 1 ಆಣೆಯಂತೆ ಮೂಲೀಕನು ಚಾರ್ಜು ಕೊಡಬೇಕೆಂದು ಮಾಡಿದ್ದರಲ್ಲಿ ನ್ಯಾಯವಿಲ್ಲ. ಖಡ್ಡಾಯದ ದಾಕಿಗೆ ಚಾರ್ಜು ಮಾಡುವುದರಲ್ಲಿ ಅರ್ಥವಿಲ್ಲ. ಬೇರೆಲ್ಲೂ ಇಂಥಾ ಪದ್ಧತಿ ಇಲ್ಲ. ಖಡ್ಡಾಯವಾದ ದಾಕಿಗೆ ಚಾರ್ಜಿಲ್ಲದೆ ಮಾಡುವುದು ಯೋಗ್ಯ. ಚಾರ್ಜಿನ ದರವು ದೊಡ್ಡದಲ್ಲವಾದರೂ, ಚಾರ್ಜುಮಾಡುವ ತತ್ವವು ಸರಿಯಾದುದಲ್ಲವಾದ ಕಾರಣ ಸರ್ಕಾರದವರು ಈ ಚಾರ್ಜನ್ನು ಇನ್ನಾದರೂ ವಜಾಮಾಡುವರಾಗಿ ನಂಬುತ್ತೇವೆ.

ಬಳದೇಪೆ.

ತಾ. 14-11-44 ರಲ್ಲಿ ಮಡಿಕೇರಿಯಿಂದ 3-15 ಗಂಟೆಗೆ ಹೊರಟು ತಿತಿಮತಿಗೆ ಹೋಗುವ ಶ್ರೀ ಗಣೇಶ ಬಸ್ಸು ಅಂಬಟ್ಟಿ ಹತ್ತಿರ ಬಿದ್ದಿತೆಂದೂ, ಇಬ್ಬರಿಗೆ ಸ್ವಲ್ಪ ಪೆಟ್ಟಾಗಿ, ಬಸ್ಸಿಗೂ ಸ್ವಲ್ಪ ಹಾನಿಯಾಗಿ, ಬಾಕಿ ಎಲ್ಲರೂ ಸುರಕ್ಷಿತವಾಗಿ ಪಾರಾದರೆಂದೂ ತಿಳಿಯಬಂದಿದೆ.

ಕೊಮ್ಮಿಯಲ್ಲಿರುವ ಒಂದನೇ ಕೊಡಗು ಪಟಲಾಮಿನ ಹನ್ನೊಂದು ಜನರು ತಮ್ಮ ಆಫೀಸರ ಹುಕುಂ ಉಲ್ಲಂಘಿಸಿದರೆಂದು ಅವರ ಮೇಲೆ ಕೋರ್ಟು ಮಾರ್ಶಲ್ ನಡೆದು ಕೆಪ್ಟನ್ ಬೆಲ್ಲಿತಂಡ ಕಾಳಪ್ಪ ಗುತ್ತು, ಹವಲ್ದಾರ್ ನೆರವಂಡ ಚಂಗಪ್ಪನವರು ತಪ್ಪಿತಸ್ಥರೆಲ್ಲರೆಂದು ತೀರ್ಮಾನಿಸಿ ಉಳಿದ 8 ಜನ 'ನಾಯಕ'ರುಗಳಿಗೆ ತಲಾ ನಾಲ್ಕು ವರ್ಷಗಳ ಕಠಿಣ ಸಜೆಯನ್ನೂ, ಒಬ್ಬ ಸಿಪಾಯಿಗೆ 3 ವರ್ಷಗಳ ಕಠಿಣ ಸಜೆಯನ್ನೂ ವಿಧಿಸಲಾಗಿದೆಯೆಂದು ತಿಳಿಯಬಂದಿದೆ.

ಪಠ್ಯಪುಸ್ತಕವನ್ನು ಹೆಚ್ಚಿನ ಬೆಲೆಗೆ ಮಾರಿದರೆಂದು ವಿಧಿಸಿದ್ದ ರೂ. 200 ಜುಲ್ಮಾನೆಯ ಮೇಲೆ ರಿವಿಜನ್ ಅರ್ಜಿ ಹಾಕಿದ್ದ ಮಡಿಕೇರಿಯ ವ್ಯಾಪಾರಿ ಚಕ್ರಪಾಣಿ ಶೆಟ್ಟಿಯವರ ಕೇಸಿನ ವಿಚಾರಣೆ ನಡೆದು ಜುಡಿಶಿಯಲ್ ಕಮಿಷನರು ಜುಲ್ಮಾನೆಯನ್ನು ವಜಾಮಾಡಿರುವರೆಂದು ತಿಳಿಯಬಂದಿದೆ.

ಮಡಿಕೇರಿ ಬೆಂಚ್‌ಕೋರ್ಟಿನ ಅಧ್ಯಕ್ಷರಾಗಿದ್ದ ರಾ. ಬ. ಪಟ್ಟಮಾಡ ದೇವಯ್ಯನವರು ಬೆಂಚ್ ಕೋರ್ಟಿಗೆ ರಾಜಿನಾಮೆ ಕೊಟ್ಟಿರುವದಾಗಿ ತಿಳಿಯಬಂದಿದೆ.

ಕೊಡಗಿನ ಚೀಫ್ ಕಮಿಷನರು ತಾ. 21 ರಲ್ಲಿ ವೀರಾಜಪೇಟೆಗೆ ಹೋಗುವರು. 23 ರಲ್ಲಿ ಶನಿವಾರಸಂತೆಗೆ ಹೋಗಿ 26ರ ವರೆಗೆ ಅಲ್ಲಿರುವರು. ತಾ. 25 ರಲ್ಲಿ ಆ ಹೋಬಳಿಯು ಜಮಾಬಂದಿ ನಡೆಯುವದು.

ತಾ. 10-11-44 ರಲ್ಲಿ ನಡೆದ ಮಂಗಳೂರು ಗವರ್ನ್‌ಮೆಂಟು ಕಾಲೇಜಿನ ವಾರ್ಷಿಕೋತ್ಸವದಲ್ಲಿ ಶ್ರೀಗಳಾದ ಬಿ. ಎಂ. ಮುತ್ತಪ್ಪ ಮತ್ತು ಕೆ. ಎ. ಗಣಪತಿ ಇವರುಗಳು ಫ್ಯಾನ್ಸಿಡ್ರೆಸಿನ ಸ್ಪರ್ಧೆಯಲ್ಲಿ 'ಕೊಡಪ ದಂಪತಿ'ಗಳ ವೇಶ ಧರಿಸಿ ಪ್ರಥಮ ಬಹುಮಾನ ಪಡೆದಿರುವರು. ವಾಕ್ ಸ್ಪರ್ಧೆಯಲ್ಲಿ ಶ್ರೀ. ಜಿ. ಬಿ. ಲಿಂಗಣ್ಣನವರು ಪ್ರಥಮಬಹುಮಾನ ಪಡೆದಿರುವರು. ವಾರ್ಷಿಕೋತ್ಸವದ ಅಧ್ಯಕ್ಷಸ್ಥಾನವನ್ನು ಮದ್ರಾಸಿನ ಗವರ್ನರರ ಸಲಹೆಗಾರರಾದ ಮಿ. ಆಸ್ಟಿನ್‌ರವರು ವಹಿಸಿದ್ದರು.

ಡೆಲ್ಲಿಯಲ್ಲಿ ತಾ 27-28 ರಲ್ಲಿನ ಡೆಯಲಿಕ್ಕಿದ್ದ ಆಹಾರ ಸಮ್ಮೇಳನವು 1945 ನೇ ಜನವರಿಗೆ ಮುಂದುವರಿಸಲ್ಪಟ್ಟ ಕಾರಣ ಚೀಫ್ ಕಮಿಷನರು ಡೆಲ್ಲಿಗೆ ಈಗ ಹೋಗುವದಿಲ್ಲವಾಗಿ ತಿಳಿಯಬಂದಿದೆ.

ಕೊಡಗು ಪ್ರಾಂತೀಕ ವ್ಯವಸಾಯ ಸಲಹೆಗಾರರ ಸಮಿತಿಗೆ ಶ್ರೀಗಳಾದ ಎಂ. ಎಂ. ಬೆಳ್ಯಪ್ಪ, ಎ ಸಿ. ತಿಮ್ಮಯ್ಯ, ಐ. ಪಿ. ಕಾರ್ಯಪ್ಪ, ಖಾ. ಸಾ. ಎ. ಅಬ್ದುಲ್‌ರಹಮಾನ್ ಖಾನ್ ಮತ್ತು ಮಿ. ಸಿ. ಎಲ್. ಜೆ. ಹಂಫ್ರೀಸರನ್ನು 27-10-44 ರಿಂದ 2½ ವರ್ಷಗಳ ವರೆಗೆ ನೇಮಿಸಲಾಗಿದೆ.

ಕೊಡಗು ಎಲೆಕ್ಟ್ರಿಕ್ ಎಸೋಸಿಯೇಶನಿನ ಆಶ್ರಯದಲ್ಲಿ ಕಾಟೇಜ್ ಹಾಕಿ ಕಪ್ಪಿನ ಪಂದ್ಯಾಟವು ಮಡಿಕೇರಿಯಲ್ಲಿ ನಡೆದು ಫೈನಲ್ಸಿಗೆ ನಿಂತ ಮಡಿಕೇರಿ ಹೈಸ್ಕೂಲ್ 'ಎ' ಟೀಮಿನವರಿಗೂ, ವಾಂಡರರ್ಸ್ ಗ್ರೀನ್ ಟೀಮಿನವರಿಗೂ ನಡೆದ ನೂರು ದಿನದ ಆಟದಲ್ಲೂ ಎರಡು ಕಡೆಯವರೂ ಸರಿಸಮಾನರಾಗಿ ಫಲಿತಾಂಶ ಇತ್ಯರ್ಥವಾಗದ ಕಾರಣ ಪಂದ್ಯಾಟವನ್ನು ಡಿಸೆಂಬರಿಗೆ ಮುಂದರಿಸಲಾಗಿದೆ.

ಜಾನುವಾರಗಳಿಗೆ ಬರುವ ದೊಡ್ಡ ರೋಗವನ್ನು ತಡೆಗಟ್ಟಲು ಕೊಡಗಿನಲ್ಲಿರುವ ಎಮ್ಮೆ, ಕೋಣ, ದನ, ಕರು, ಎತ್ತು ಮೊದಲಾದುವುಗಳಿಗೆ ಖಡ್ಡಾಯವಾಗಿ ದಾಕುಹಾಕುವ ಖಾನೂನು ತಾ. 10-11-44 ರಿಂದ ಜಾರಿಗೆ ಬಂದಿದೆ. ಇದರ ಪ್ರಕಾರ ಪ್ರತಿಯೊಬ್ಬನೂ ತನ್ನಲ್ಲಿರುವ ಜಾನುವಾರುಗಳನ್ನು ವೆಟರ್‌ನರಿ ಆ. ಸರ್ಜನರಿಂದ ನಿಶ್ಚಿತವಾದ ಸ್ಥಳಕ್ಕೆ ತಂದು ದಾಕುಹಾಕಿಸಿಕೊಳ್ಳಬೇಕು. ಕರಗಳಿಗೆ ಒಂದಾಣೆಯಂತೆಯೂ ದೊಡ್ಡವುಗಳಿಗೆ ಎರಡಾಣೆಯಂತೆಯೂ ಫೀಜು ಕೊಡಬೇಕು. ಈ ಖಾನೂನನ್ನು ಉಲ್ಲಂಘಿಸುವವರು ಶಿಕ್ಷೆಗೆ ಗುರಿಮಾಡಲ್ಪಡುವರೆಂದೂ ಪ್ರಕಟವಾಗಿದೆ.

ಕೊಡಗು ಕಾಂಗ್ರೆಸ್ ಕೆಲಸಗಾರರು ತಾ. 13-11-44 ರಲ್ಲಿ ವೀರಾಜಪೇಟೆಯಲ್ಲಿ ಶ್ರೀ. ಕ. ಸಿ. ಕರುಂಬಯ್ಯನವರ ಅಧ್ಯಕ್ಷತೆಯಲ್ಲಿ ಸಭೆಸೇರಿ ವಿಧಾಯಕ ಕಾರ್ಯಕ್ರಮಗಳನ್ನು ಕೈಕೊಳ್ಳಲು ಅನುಕೂಲವಾಗುವಂತೆ 'ಕಾಂಗ್ರೆಸ್ ಸೇವಾಸಂಘ' ವೆಂಬ ಹೊಸ ಸಂಸ್ಥೆಯನ್ನು ಸ್ಥಾಪಿಸಿರುವರು. ಈ ಸಂಸ್ಥೆಗೆ ಮೆಂಬರುಗಳನ್ನು ಸೇರಿಸುವ ಕೆಲಸವು ಶೀಘ್ರದಲ್ಲೇ ಪ್ರಾರಂಭವಾಗಲಿದೆ. ನಿಶಾನಿಷೇಧ, ಖಾದಿ ಪ್ರಚಾರ, ಮೊದಲಾದ ಕಾರ್ಯಕ್ರಮಗಳನ್ನು ಜಾರಿಯಲ್ಲಿ ತರಲು ಯೋಗ್ಯ ಯೋಜನೆಗಳನ್ನು ಆಲೋಚಿಸಲು ತಾ. 23-11-44 ರಲ್ಲಿ ವೀರಾಜಪೇಟೆಯಲ್ಲಿ ಒಂದು ಮೀಟಿಂಗನ್ನು ಇಡಲಾಗಿದೆ.

ಮನೆ ಮಾರಾಟಕ್ಕಿದೆ.

ವೀರರಾಜಪೇಟೆ, ದೇವಾಂಗದ ಬೀದಿಯಲ್ಲಿ (ಜೈನ ಮೇಣ ಸಂಘವಿರುವ ಬೀದಿ) ಈಗ ಮುಂಡೇಪಂಡ ಶ್ರೀ ಸೋಮಯ್ಯನವರು ವಾಸವಿರುವ ಹೊಸ ಮನೆ ಮಾರಾಟಕ್ಕಿದೆ. ಇಟ್ಟಿಗೆ ಕಟ್ಟಿದ ಮಹಡಿಮನೆ. ತುಂಬ ಗಾಳಿ ಬೆಳಕಿದೆ. ಹಿತ್ತಲು, ಬಚ್ಚಲು ಮನೆ, ಮುರಕಲ್ಲಿನಲ್ಲಿ (ಲೇಟ್ರೈಟ್) ಕಟ್ಟಿದ ಬಾವಿ, ಸೌದೆ & ದನದ ಕೊಟ್ಟಿಗೆ ಮತ್ತು ಕಕ್ಕಸುಮನೆ ಇವೆ. ಎಲ್ಲವಕ್ಕೂ ಬಾಸೆಲ್ ಮಿಷನ್ ಹಂಚು ಹಾಕಿದೆ. ಬೆಲೆ ರೂ. 6000/-. ಕೊಳ್ಳಲು ಆಸೆಕ್ಷೆ ಇರುವವರು ಈ ಕೆಳಗಿನ ವಿಳಾಸಕ್ಕೆ ಬರೆಯಬಹುದು.

ಎಸ್. ಎಸ್. ಗಂಗಾಧರ,
ಹೆಡ್ ಮಾಸ್ಟರ್,
ಹುದಿಕೇರಿ, ದ. ಕೊಡಗು.

ಅಖಿಲ ಕೊಡಗು ಬತ್ತ ವ್ಯಾಪಾರಿಗಳ ಎಸೋಸಿಯೇಶನ್, ವೀರಾಜಪೇಟೆ.

ನೋಟೀಸು.

ಮುಲಬಾರಿಗೆ ಸಪ್ಲೈ ಮಾಡಲು ಬಾಕಿ ಇರುವ 112½ ಗಾಡಿ ಬತ್ತವನ್ನು ಶೀಘ್ರದಲ್ಲೇ ಸಪ್ಲೈ ಮಾಡಬೇಕಿದೆ. ಸ್ಟಾಕು ಇರುವವರು ನಮ್ಮ ಆಫೀಸಿಗೆ ಕೂಡಲೇ ತಿಳಿಸಿದರೆ ಅವರವರಿಗೆ ಚೀಲ, ಲಾರಿ ಮತ್ತು ಹಣವನ್ನು ಕಳುಹಿಸಿಕೊಡಲಾಗುವದು.

ಹೆಚ್ಚಿನ ವಿವರಕ್ಕೆ ಈ ಪತ್ತೆಗೆ ಬರಕೊಳ್ಳಿರಿ:—

ಸಿ. ಪಿ. ಕುಶಾಲಪ್ಪ (ಪ್ರೆಸಿಡೆಂಟ್),
ತಾ. 17-11-44. ಬಿ. ಪಿ. ಬೋಪಯ್ಯ (ಗೌ. ಕಾರ್ಯದರ್ಶಿ).

ವಾರ್ತೆಗಳು.

ಮಹಾತ್ಮ ಗಾಂಧಿಯವರು ತಮಗೆ ಒಲಸವಿರುವ ವರೆಗೆ ಉಪವಾಸ ಕೈಕೊಳ್ಳಲಾರರೆಂದೂ, ಉಪವಾಸವು ತಮ್ಮಕ ಜೀವ ಆಸ್ತ್ರವೆಂದೂ, ಅಂತರಾತ್ಮನ ಕರೆ ಬಂದಾಗ ಯಾರ ಮಾತನ್ನೂ ಲೆಕ್ಕಿಸದೆ ಉಪವಾಸ ಮಾಡುವದಾಗಿಯೂ ಹೇಳಿರುವರು.

ಸರ್ ತೇಜ್ ಬಹದೂರ್ ಸಪ್ರು ರವರು ಹಿಂದೂದೇಶದ ಬಿಕ್ಕಟ್ಟಿನ ಪರಿಹಾರಕ್ಕೆ ಹೊಸದೊಂದು ಯೋಜನೆ ಮಾಡಿರುವರೆಂದೂ; ಅದಕ್ಕೆ ಮಹಾತ್ಮರು ಬೆಂಬಲ ಕೊಟ್ಟಿರುವರೆಂದೂ ತಾ. 18ರಲ್ಲಿ ನಡೆಯುವ ಪಕ್ಷಾತೀತ ಮುಂಬ್ಹಾಳುಗಳ ಪರಿಷತ್ತಿನಲ್ಲಿ ಇದನ್ನು ಒಮ್ಮತಗೊಡಿಸಲಾಗುವದೆಂದೂ ತಿಳಿದು ಬಂದಿದೆ.

ಪಂಡಿತ ಜವಾಹರರ 55ನೇ ಜನ್ಮೋತ್ಸವದ ದಿನ ಇಂಗ್ಲೆಂಡಿನ ಮಿ. ಫೆನ್ನರ್ ಬ್ರಾಕ್ವೆಯವರು ಒಂದು ಸಂದೇಶವನ್ನು ಕಳುಹಿಸುತ್ತಾ 'ಜವಾಹರರು ಜಗತ್ತಿನ ಅದ್ವಿತೀಯ ವ್ಯಕ್ತಿಗಳಲ್ಲಿ ಒಬ್ಬರು. ಬ್ರಿಟಿಷ್ ಮಂತ್ರಿಮಂಡಳದ ಯಾರೂ ಧೀಶಕ್ತಿಯಲ್ಲಾಗಲೀ, ವ್ಯಕ್ತಿತ್ವದಲ್ಲಾಗಲೀ, ಪ್ರಪಂಚದ ಅನುಭವಲ್ಲಾಗಲೀ ಇವರ ಸರಿ ತೂಗರು. ಮಿ. ಅನೀರಿಯವರು ಅವರ ನಮುಂದೆ ಶರೀರಕ, ನೈತಿಕ, ರಾಜನೈತಿಕ ಶಕ್ತಿಯಲ್ಲಿ ಕುರೂಪಿಗಳು. ಇಂಥಾ ವ್ಯಕ್ತಿಗೆ ಇಂಥಾ ಮಹಾವ್ಯಕ್ತಿಗಳನ್ನು ಬಂಧನದಲ್ಲಿಡಲು ಅಧಿಕಾರವು ಕೊಡಲ್ಪಟ್ಟಿದೆ' ಎಂದಿರುವರು.

1942ರಲ್ಲಿ ದೇಶದ ಉದ್ದಗಲಕ್ಕೆ ಉಂಟಾದ ಆಂದೋಲನವನ್ನು ಅಡಗಿಸಲು ಸರಕಾರದವರು ಯಾವ ಯಾವ ರೀತಿಯ ಕಾರ್ಯಕ್ರಮ ಕೈಕೊಂಡರೆಂಬುವುದನ್ನು ಬರೆದು ತಿಳಿಸಬೇಕೆಂದು ಪ್ರತಿ ಪ್ರಾಂತ್ಯದವರನ್ನು ಗಾಂಧೀಜಿಯವರು ಕೇಳಿರುವರು.

ಅಮೇರಿಕಾದಲ್ಲಿ ಓದುತ್ತಿರುವ ತಮ್ಮ ಮಕ್ಕಳಾದ ಚಂದಲೇಖಾ ಮತ್ತು ನಯನತಾರಾ ಇವರನ್ನು ನೋಡಲು ಶ್ರೀಮತಿ ವಿಜಯಲಕ್ಷ್ಮಿ ಪಂಡಿತರವರು ಅಮೇರಿಕಕ್ಕೆ ಬರುವ ಡಿಶಂಬರಿನಲ್ಲಿ ಹೋಗುವರು.

ಕಸ್ತೂರ್‌ಬಾ ನಿಧಿಯ ಕೇಂದ್ರ ಸಮಿತಿಯ ವಿೂಟಿಂಗು ಮಹಾತ್ಮಗಾಂಧಿಜಿಯವರ ಅಧ್ಯಕ್ಷತೆಯಲ್ಲಿ ನಡೆದು ನಿಧಿಯ 'ಟ್ರಸ್ಟ್ ಡೀಡ್'ನು ಒಪ್ಪಿ ಶ್ರೀಮತಿ ಮೃದುಲಾ ಬೆನ್‌ರನ್ನು ಆದರ ವ್ಯವಸ್ಥಾಪಕ ಕಾರ್ಯದರ್ಶಿನಿಯೊಗಿ ಆರಿಸಲಾಗಿದೆ.

ಶ್ರೀ ಶರತ್‌ಚಂದ್ರಬೋಸರ ಮಕ್ಕಳಾದ ಇಂಗ್ಲೆಂಡಿನಲ್ಲಿದ್ದ ಬ್ಯಾರಿಸ್ಟರ್ ಶ್ರೀ ಅಮಿಯನಾಥ ಬೋಸರು ಭಾರತಕ್ಕೆ ಹೊರಟಿದ್ದಾರೆ. ಅವರು ಹಿಂದೂದೇಶಕ್ಕೆ ಬಂದೊಡನೆಯೇ ಮಹಾತ್ಮಗಾಂಧಿಜೀಯವರನ್ನೂ ಇನ್ನಿತರ ಮುಂದಾಳುಗಳನ್ನೂ ಕಾಣಲಿರುವರು.

(1ನೇ ಪುಟದಿಂದ ಸಾಗಿದ್ದು)

ಮೇರಿಕವು ಸದ್ಯದಲ್ಲೇ ಜಪಾನರ ಮೇಲೆ ಸರ್ವಾಂಗೀಯ ಧಾಳಿ ಕೈಕೊಳ್ಳಲಿದೆ. ಒಂದು ವೇಳೆ ಅಂಥಾ ಧಾಳಿ ಪ್ರಾರಂಭವಾದರೆ ತನಗೆ ತೊಂದರೆಯೂ ದೀತೆಂದು ಚೀನೀ ಯುದ್ಧವನ್ನು ತಡೆ ಹಿಡಿಯುವ ಈ ಒಪ್ಪಂದದ ಏರ್ಪಾಡನ್ನು ಜಪಾನು ಮಾಡುತ್ತಿರಬಹುದು. ಸಖ್ಯಕ್ಕೆ ಚೀನಕ್ಕೆ ಅನುಕೂಲವಾಗುವ ಕೆಲವು ಶರತ್ತುಗಳಿಗೂ ಜಪಾನು ಒಪ್ಪಬಹುದು. ಕಳೆದ ಎಂಟು ವರ್ಷಗಳಿಂದ ಯುದ್ಧ, ಆಂತರಿಕ ಕಲಹ, ಭೂಭಿಕ್ಷೆ ಇವುಗಳ ಹಾವಳಿಯಿಂದ ದೆಸಗೆಟ್ಟ ಚೀನಾವು ಜಪಾನದ ಕರಾರುಗಳಿಗೆ ಒಪ್ಪಿದರೆ ಯಾರೂ ಆಶ್ಚರ್ಯಪಡಲು ಕಾರಣವಿಲ್ಲ. ಯಾಕೆಂದರೆ ಚೀನಾವು ಬಹು ಮಟ್ಟಿಗೆ ಯುದ್ಧದಿಂದ ಬಳಲಿ ಬೆಂಡಾಗಿದೆ.

ಫಿಲಿಪ್ಪೈನ್ ದ್ವೀಪಗಳಲ್ಲಿ ಒಂದಾದ ಲೆಟಿಯಲ್ಲಿ ಕಾಲಿಕ್ಕಿದ ಅಮೇರಿಕನರ ಮುನ್ನಡೆಯ ವಾರ್ತೆ ಕೇಳಿಬರುತ್ತಿಲ್ಲ. ಜಪಾನರು ಎಚ್ಚೆತ್ತು ತೀವ್ರ ಪ್ರತಿಭಟನೆಯನ್ನು ಕೂಡುತ್ತಿದ್ದಾರೆಂದೂ, ಹೆಚ್ಚು ಹೆಚ್ಚು ಸೇನೆಗಳನ್ನು ತಂದು ತರುಬುತ್ತಿದ್ದಾರೆಂದೂ ವಾರ್ತೆಗಳು ತಿಳಿಸುತ್ತವೆ. ಸುಮಾರು 7000 ವಿರುವ ಫಿಲಿಪ್ಪೈನ್ ದ್ವೀಪಕಲ್ಪದಲ್ಲೊಂದಾದ ಲೆಟಿಯಲ್ಲಿಯೇ ಪ್ರಸಂಗ ಹೀಗಾದರೇ ಇಡೀ ಫಿಲಿಪ್ಪೈನನ್ನು ವಶಪಡಿಸಿಲು ಅಮೇರಿಕನರಿಗೆ ಬಹು ದೀರ್ಘಕಾಲ ಬೇಕಾಗುವದರಲ್ಲಿ ಸಂಶಯವಿಲ್ಲ. ತಮ್ಮ ರಾಷ್ಟ್ರದ ಮೇಲೇರಿ ಬರುವಾಗ ನಿರ್ಬಲರೂ ವಿರಳ ಪ್ರಶದಿಂದ ಎದುರಿಸುವದು ಸ್ವಾಭಾವಿಕ. ಕೆಲವೇ ಫಿನ್ನರು ಲಕ್ಷಾಂತರ ರಷ್ಯನರನ್ನು ಎದುರಿಸಿ ಎಲ್ಲರೂ 'ಭೀಶ್' ಎನ್ನುವಂತೆ ಹೋರಾಡಿದರು. ಹಾಗಿರುವಾಗ ದೇಶಭಕ್ತಿಗೆ ಕೀರ್ತಿವೆತ್ತ ಈ 9 ಕೋಟಿ ಜಪಾನರು ಅದೆಷ್ಟು ಪ್ರತಾಪದಿಂದ ಹೋರಾಡಲಿಕ್ಕಿಲ್ಲ? ಜಪಾನರನ್ನು ಮಣಿಯುವಂತೆ ಕೆಲಸವಾದರೂ ಕೆಲವರು ಆಶಿಸುವಂತೆ ಸುಲಭದಲ್ಲಿ ಆಗತಕ್ಕುದಲ್ಲ.

ಶ್ರೀ ಶಾರದಾ ಕಾಫಿ ಪುಡಿ.

ಯಾವುದೊಂದು ಮಿಶ್ರಣವಿಲ್ಲದೆ ಪ್ರತಿದಿನವೂ ಹುರಿದು ಪುಡಿ ಮಾಡಿದ್ದನ್ನೇ ಕೊಳ್ಳಿರಿ.

ಕಾಫಿ ಹುಡಿಯ ಕ್ರಯ ರಾತ್ತಿಗೆ ರೂ. 1-11-6

ನಿಮ್ಮ ಮನೆಗಳಲ್ಲಿರುವ ಕಾಫಿ ಬೀಜವನ್ನು ಕ್ರಮ ಪ್ರಕಾರವಾಗಿ ಹುರಿದು ಪುಡಿ ಮಾಡಿಸುವುದಕ್ಕೆ ಕೆಳಗಿನ ವಿಳಾಸವನ್ನು ಗಮನಿಸಿರಿ.

ಹುಡಿ ಮಾಡಲು ಅಳತೆ ಸೇರಿಗೆ ಆ. 0-1-6

SHRI SHARADA COFFEE HOME (WORKS),
7) McDOWELLS BUILDINGS, *MERCARA.*

ಅನುಭವಸ್ಥ ಕೆಲಸಗಾರರಿಂದ ತಯಾರಿಸಿದ ಸುಪ್ರಸಿದ್ಧ ಮಂಗಳೂರು
ಮೋಹನ್ ಬೀಡಿಗಳನ್ನೇ ಸೇದಿ ಆನಂದ ಪಡೆಯಿರಿ.
ಎಲ್ಲಾ ತಂಬಾಕು ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ.
3) ಕೊಡಗಿನ ಪ್ರವರ್ತಕರು:—
ವೀರರಾಜೇಂದ್ರಪೇಟೆಗೆ— ಶ್ರೀ ಯು. ಕೆ. ಮುದ್ದಪ್ಪನವರು
ಮಡಿಕೇರಿಗೆ— ಶ್ರೀ ದುರ್ಗಾ ಸ್ಟೋರ್ಸ್.
ಮೋಹನ್ ಬೀಡಿ ವರ್ಕ್ಸ್, 273, ರೈಲ್ವೆ ಸ್ಟೇಷನ್ ರಸ್ತೆ, ಮಂಗಳೂರು.

Navabharat Book Depot Udipi, South India

— ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು —

	ರೂ. ಆ.				
ಸುಲಭದಲ್ಲಿ ಇಂಗ್ಲಿಷ್	1.4	ಮೂರು ಪ್ರಹಸನಗಳು	0.14	ವೀರಭೂಮಿ	0.2
ಯುವಕರಿಗೆ ಮತ್ತು ನಯಸ್ಕರಿಗೆ ಸುಲಭವಾಗಿ ಇಂಗ್ಲಿಷನ್ನು ಅನ್ಯ ಸಹಾಯವಿಲ್ಲದೆ ಕಲಿಸುವ ಇಂಗ್ಲಿಷ್ ಸ್ವಯಂಬೋಧಿನಿ		ಸ್ವತಂತ್ರಜೀವನೋಪಾಯ	0.3	ವತ್ಸಲಾ	0.8
		ಪುರುಷ ವಧು	0.4	● ಕವಿತೆಗಳು	
		ಹೆಂಡ್ತಿ ಗಂಡನಾದರೆ	0.4	ಕಾವ್ಯ ಸಾಮ್ರಾಜ್ಯ	0.12
● ನಾಟಕಗಳು		● ಕತೆಗಳು		ಮುಗುಳು	0.3
ಪ್ರೇಮವಿಜಯ	0.12	ನಗೆನೋಟಗಳು	0.14	ಶ್ರೀಮುಖ	1.0
ದೇಶಭಕ್ತ	1.4	ಅನ್ನದೇವರು		ಪುರಂದರದಾಸರ ಕೀರ್ತನೆ	1.0
ವೃಭಿಚಾರಿಣಿ ಯಾರು	0.12	ಮತ್ತು ಇತರ ಕತೆಗಳು	1.0	ಭಗವದ್ಗೀತಾ (ಮಖೂಲ— ಸಿಲ್ಕ್ ಬೈಂಡು)	1.4
ಕುಶಲವ	0.5	ಭೌರತೀಯ ಕತೆಗಳು	0.14	● ಇತರ ಪುಸ್ತಕಗಳು	
ಸಂಶಯ ಪಿಶಾಚಿ	0.8	ನಂದಾದೀಪ	0.10	ಮುಂದಿನ ದೇವರು	0.3
ರಂಗಭೂಮಿ	0.8	ನಾಡಕತೆಗಳು	0.3	ರಾಷ್ಟ್ರಸಭೆಯ ಇತಿಹಾಸ	2.8
ಪ್ರಕಾಶ	1.12	ಕಡಿಮೂಕಾಣದನೋಟಗಳು	0.8	ಬಾಲ್ಯವಾಜ್ಮಯ	0.3
ಧರ್ಮ ಸಂಕಟ	0.4	ನಾರೀ ಹೃದಯ	0.14	ಮಿತ ಸಂತತಿ	0.8
ಆರೋಗ್ಯ ಪ್ರತಾಪ	0.12	ಆಂತರಂಗದ ಕತೆಗಳು	0.10	ನಿಶ್ಚಯ ಜ್ಞಾನ	0.8
ಪಂಚಾರತಿ	0.6	ಪ್ರೇಮಸ್ರವಾಹ	0.6	ಪಾಪಪೂರಿತ ಮಕ್ಕಳು	1.3
ಪ್ರತೀಕಾರ	0.6	ಆಹುತಿ ಇತ್ಯಾದಿಕತೆಗಳು	0.12	ಚಿಗುರು	0.6
ಸೇವಾಪಥ	0.3	● ಕಾದಂಬರಿಗಳು		ಇತರ ಪುಸ್ತಕಗಳ ಕೆಟಲಾಗಿಗೆ 2 ಆಣೆ ಸ್ಟಾಂಪಿಟ್ಟು ಬರೆಯಿರಿ	
		ಸನ್ಯಾಸಿಯ ಯೋಗಿನಲ್ಲಿ	0.8		

ನವಭಾರತ ಪುಸ್ತಕ ಭಂಡಾರ, ರಿಜಿಸ್ಟರ್ಡ್, ಪಬ್ಲಿಷರ್ಸ್, **ಉಡುಪಿ, ದ. ಕ.**

---

4 Navabharat Book Depot Udipi, South India

"ಟ್ರೂ ಪಿಕಲ್"

ಪಂ. ಮೋತಿಲಾಲ್ ನೆಹರೂ, ಹಕೀಮ್ ಅಜಮಲ್‌ಖಾನ್,
ಡಾ. ಯಂ. ಎ. ಅನ್ಸಾರಿ, ಸುಭಾಶ ಚಂದ್ರ ಬೋಸ್
ಮೊದಲಾದ ರಾಷ್ಟ್ರೀಯ ಧುರೀಣರಿಂದ ಸ್ಥಾಪಿಸಿ,
ಬೆಳೆಸಲ್ಪಟ್ಟ ರಾಷ್ಟ್ರೀಯ ವಿಮಾ ಸಂಸ್ಥೆ.

ಜೀವನ ಸಂಧ್ಯಾ ಕಾಲದಲ್ಲಿ ಜೀವವಿಮೆಯೇ ನಿಮ್ಮನ್ನು ರಕ್ಷಿಸುವದು. ಆದ್ದರಿಂದ ಹಿಂದೂ ದೇಶದ ರಾಷ್ಟ್ರೀಯ ಸಂಸ್ಥೆಗಳಲ್ಲಿ ಹಿರಿದಾದ **ಟ್ರೂ ಪಿಕಲಿನಲ್ಲಿ** ವಿಮೆ ಮಾಡಿರಿ.

ಮುಖ್ಯ ಖಜೇರಿ: ಹೊಸ ಡಿಲ್ಲಿ] [ಹೆಚ್ಚಿನ ಮಾಹಿತಿಗೆ ಈ ಪತ್ತೆಗೆ ಬರೆಯಿರಿ:

ಯಂ. ಯು. ಅಚ್ಚಣ್ಣ, ಯಂ. ರಂಗನಾಥಶೆಟ್ಟಿ,
43) ಮಡಿಕೇರಿ. OR ಬ್ರಾಂಚ್ ಮೇನೇಜರ್, ಮಂಗಳೂರು.

The Canara Banking Corporation Limited.

(Incorporated in British India)

ETD— Head Office—UDIPI, (S. K.) —1906

Paid up capital .. .. .. *Rs. 14,38,255*
Reserves .. .. .. *Rs. 4,10,000*
Total working Resources .. .. *Exceed Rs. 1 Crore*

ANNOUNCEMENT.

A Branch of the Bank will Shortly be Opened at
5) HUBLI.

ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

— ಬೇಕಾಗಿದ್ದಾರೆ —

ಜನಬಳಿಕೆಯಿರುವ ಕಾರ್ಯಚತುರ ಏಜೆಂಟರು ಲಾಭದಾಯಕ ಶರತುಗಳ ಮೇಲೆ ಕೊಡಗಿನ ಉದ್ದಗಲಕ್ಕೂ ಬೇಕಾಗಿದ್ದಾರೆ. ಯೋಗ್ಯತೆ, ವಯಸುಗಳನ್ನು ಸೂಚಿಸಿ ಬರೆಯಿರಿ.

ಕೊಚ್ಚಿಕಾರ್ ಬ್ರದರ್ಸ್, ಲಿ.

ಮದ್ರಾಸ್ ಬ್ರಾಂಚಿನ ಸೆಕ್ರೆಟ್ರಿಗಳು.

9) ಪಿ. ಬಿ. ನಂ. 337, ಮದ್ರಾಸು.

ಧಾತು ವೃದ್ಧಿ ರಸಾಯನ (ZANDU)

"ರ್ಯಾಕ್ಯೂ—ಫಾಸ್ಫೋ—ಮೊಲ್ಫ್"

ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.

ಈ ರಸಾಯನ} ಕಾಯಿಲೆಯವರಿಗೆ, ಆರೋಗ್ಯದಿಂದಿರುವವರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ರೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಅಶಕ್ತರಿಗೆ ಟಾನಿಕ್.

ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರರಿಗೆ, ಶ್ರಮ ಜೀವಿಗಳಿಗೆ, ರೋಗಿಗಳಿಗೆ, ನಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜಠರಾಗ್ನಿಯನ್ನು ಸರಿಪಡಿಸುವುದು. ಮೆದುಳಿಗೆ ತಂಪನ್ನುಂಟುಮಾಡುವುದು, ನಾಲಿಗೆಗೆ ರುಚಿಯೂಡಿಸುವುದು. ಇದರಲ್ಲಿ ನವಜೀವನಕರವಾದ ಎಲ್ಲಾ ವಿಟಮಿನ್ನುಗಳು ಕೆಂಪು ರಕ್ತ ಕಣಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಿಗಳಿವೆ.

ಇದರಲ್ಲಿ ಇಲೆಕ್ಟರ್ ಫಾಸ್ಫೋಮೊಲ್ಫ್, ಹೆಮೋಗ್ಲೋಬಿನ್, ಸೋಡಿಯಂ ಗ್ಲಿಸರೊ ಫಾಸ್ಫೇಟ್ ಪೆಪ್ಟಿನ್, ಸಾಲ್, ಮೊಲ್ಫ್ ಎಕ್ಸ್‌ಟ್ರಾಕ್ಟ್, ದಾಕ್ಷಾಸವ ಮೊದಲಾದ ಪ್ರಸಿದ್ಧ ಔಷಧಿಗಳಂಶವಿದೆ. ಇಂದಿನಿಂದಲೇ ಸೇವಿಸಿ ಅನುಭವ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧಿ ಷಾಪುಗಳಲ್ಲಿದೆ.

ಝುಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,
ಗೋಖಲೆ ರೋಡ್, ಬೋಂಬೆ.
11)

ಎಂಪೈರ್ ಆಫ್ ಇಂಡಿಯಾ
ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

47) ಸ್ಥಾಪನೆ:—೧೮೯೭.

ಳನೇ ವಾರ್ಷಿಕವ	ಒಟ್ಟು ಆದಾಯ	೯೭,೩೭,೦೦೦ ರೂಪಿ
ರದಿಯಲ್ಲಿನ ಕೆಲವು	ಚಾಲ್ತಿಯಿರುವ ವಿಮೆ	೧೬,೪೯,೮೮,೦೦೦ ,,
ಸ್ಪಷ್ಟ ಸಂಗತಿಗಳು.	ಆಸ್ತಿ	೬,೩೦,೪೬,೦೦೦ ,,
ಕಂಪೆನಿಯ ಆದಿಯಲ್ಲಿ ಕೊಟ್ಟ ಕ್ಲೈಮುಗಳು		೮,೩೮,೦೦,೦೦೦ ,,

ಆಂಗ ಕಛೇರಿ:	ಏಜೆನ್ಸಿ	ಪ್ರಧಾನ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್,	ಅರ್ಜಿಗಳನ್ನು	ಎಂಪೈರ್ ಆಫ್ ಇಂಡಿಯಾ
ಕೆಂಪೇಗೌಡ ರಸ್ತೆ, ಬೆಂಗಳೂರು.	ಸ್ವಾಗತಿಸಿದೆ.	ಲೈಫ್ ಬಿಲ್ಡಿಂಗ್ ಬೋಂಬೆ

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರ್ ಮೊಬಲಗು ರೂ. 95,000, ಜನೂ ಬಂದ ಠೇವಣಾತಿ 2,24,755 ವಸೂಲಾದ ಕ್ಷೇಮನಿಧಿ 2,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ಠೇವಣಾತಿಗಳಿಗೆ ಒಂದು ವರ್ಷದಿಂದ ಮೂರು ವರ್ಷಗಳ ವರೆಗೆ ಶೇಕಡ 2. ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ 2½. ಐದು ವರ್ಷಗಳಿಂದ ಹತ್ತು ವರ್ಷಗಳ ವರೆಗೆ 3½. ಹತ್ತು ಆದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗೆಳಿಗೆ ಶೇಕಡ 0—8—0. ವರ್ಷಕ್ಕೊಮ್ಮೆ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

— ಅಮೇರಿಕದ ಮತದಾನ ಪದ್ಧತಿ —

(ಸ್ಥಾಯುಕ್ತ ಅಮೇರಿಕದ ಅಧ್ಯಕ್ಷ ಚುನಾವಣೆಯು ಕಳೆದ ತಾರೀಕು 7ರಂದು ನಡೆಯಿತು. ರೂಸ್‌ವೆಲ್ಟರು ನಾಲ್ಕನೇ ಬಾರಿ ಬಹುಮತದಿಂದ ಅಧ್ಯಕ್ಷ ಪದವಿಗೆ ಆರಿಸಲ್ಪಟ್ಟರು. 36 ಸಂಸ್ಥಾನಗಳಲ್ಲಿ ಅವರಿಗೆ ಬಹುಮತ ದೊರೆಯಿತು. ಈ ಸಂದರ್ಭದಲ್ಲಿ ಅಮೇರಿಕಾದಲ್ಲಿ ಅಧ್ಯಕ್ಷ ಚುನಾವಣೆ ಯಾವ ರೀತಿಯಲ್ಲಿ ನಡೆಯುವುದೆಂಬದನ್ನು ತಿಳಿಯುವುದು ಅವಶ್ಯವಿದೆ.)

ಮತ ಕೊಡುವ ಪೋಲಿಂಗ್ ಸ್ಟೇಷನುಗಳು ಸಂಯುಕ್ತ ಅಮೇರಿಕದಲ್ಲಿ ಹಲವು ಸಾವಿರ ಇವೆ. ಮುಂಜಾನೆ ನಸುಬೆಳಕಿನಲ್ಲಿ ಅವು ತೆರೆಯಲ್ಪಟ್ಟು ಸಂದರೆ 12 ತಾಸುಗಳ ತನಕ (ಕೆಲವು ಸಂದರ್ಭಗಳಲ್ಲಿ ಇನ್ನೂ ಹೆಚ್ಚು ಸಮಯ) ತೆರೆದೇ ಇರುತ್ತವೆ. ಶಾಲೆಗಳಲ್ಲಿ, ಸ್ಟೋರುಗಳಲ್ಲಿ, ಲೈಬ್ರೆರಿಗಳಲ್ಲಿ, ಕ್ಲಾರಿಕರ ಸೆಲೂನುಗಳಲ್ಲಿ ಮತ್ತು ಮತದಾರರಿಗೆ ಮತಕೊಡಲು ಅನುಕೂಲವಿರುವ ಸರ್ವ ಸಾಮಾನ್ಯ ಎಲ್ಲಾ ಸ್ಥಳಗಳಲ್ಲಿ ಪೋಲಿಂಗ್ ಸ್ಟೇಷನ್ ಏರ್ಪಡಿಸುತ್ತಾರೆ. ನಗರದಲ್ಲಿ ವಾಸಿಸುವ ಪೋಟರನು ತನ್ನ ಮತಕೊಡಲು ಕೆಲವೇ ನೂರು ಅಡಿ ಗಳಷ್ಟು ನಡೆದರಾಯಿತು. ಆದರೆ ನಗರದ ಹೊರಗೆ ಹಳ್ಳಿಗಳಲ್ಲಿ ವಾಸಿಸುವನು ಕೆಲವೊಮ್ಮೆ ಐದು ಹತ್ತು ಮೈಲುಗಳ ತನಕ ನಡೆಯಬೇಕಾಗುತ್ತದೆ.

ಪೋಲ್‌ಗಳ ಸಮೂಪ ಚುನಾವಣೆಯ ಪ್ರಸ್ತಾಪ ಬರಕೂಡದು. ಶಿಸ್ತು ಮುರಿಯಂತೆ ನೋಡಿಕೊಳ್ಳಲು ಪೋಲೀಸರು ಹಾಜರಿರುತ್ತಾರೆ. ಅವರಿಗೆ ಅಷ್ಟು ಅಧಿಕಾರ ಹೊರತು ಬೇರೆ ಹಕ್ಕಿಲ್ಲ. ಚುನಾವಣೆಯ ದಿನ ಮೂದಕ ಪದಾರ್ಥಗಳ ಮೂರಾಟ ನಿಲ್ಲಿಸುತ್ತಾರೆ; ಎಲ್ಲಾ ಪಕ್ಷದವರು ತಮ್ಮ ಓಟಿಂಗ್ ಕುರಿತು ಸರಿಯೋ ತಪ್ಪೋ ಎಂದು ಮಂದಟ್ಟು ಮಾಡಿಕೊಳ್ಳಲು ಪ್ರತ್ಯೇಕ ಪೋಲ್ ವಾಚರ್ಸ್ ಇದ್ದಾರೆ. ಮತಗಳನ್ನು ಎಣಿಸುವ ಕೆಲಸ ರಾತ್ರಿಯ ತನಕ ನಡೆಯುತ್ತದೆ. ಇಲೆಕ್ಷನ್ ಆಫೀಸರಿಗೆ ಈ ಕೆಲಸ ನಿರ್ವಹಿಸಿದುದಕ್ಕೆ ದಿನದ ಸಂಬಳ ಪ್ರತ್ಯೇಕ ದೊರೆಯುತ್ತದೆ. ಮತಗಳ ಸಂಖ್ಯೆಯ ಕುರಿತು ಅವನು ಕೇಂದ್ರ ಖಜೇರಿಗೆ ವರದಿ ಕಳುಹಿಸಿಕೊಡಬೇಕು.

ವೋಟರರು ಸಹಿ ಹಾಕುವ ಒಂದು ಪ್ರತ್ಯೇಕ ರಿಜಿಸ್ಟರ್ ಇದೆ. ಅದರ ಹೆಸರುಗಳನ್ನು ಇಲೆಕ್ಷನ್ ಅಂತ್ಯದಲ್ಲಿ ಪುನಹ ಪರಿಶೀಲಿಸಲಿದೆ. 3300000 ಓಟರರಿರುವ ನ್ಯೂಯಾರ್ಕ್ ನಗರದಲ್ಲಿ 4000 ಪೋಲಿಂಗ್ ಸ್ಟೇಷನುಗಳಿವೆ. ಆಸುಪಾಸಿನ ಗ್ರಾಮಗಳಲ್ಲಿ ಒಂದೊಂದೇ ಪೋಲಿಂಗ್ ಸ್ಟೇಷನ್ ಇರುವುದೂ ಊಂಟು. ಸಾಮಾನ್ಯವಾಗಿ ಪ್ರತಿಸಾವಿರ ಓಟರಿಗೆ ಒಂದೊಂದು ಪೋಲಿಂಗ್ ಸ್ಟೇಷನಿದೆ

ಓಟರನಿಗೆ ಓಟು ಕೊಡುವ ಕಾಲಕ್ಕೆ ಆಫೀಸುಗಳಲ್ಲಿ ಬಿಡು ದೊರೆಯುತ್ತದೆ. ಕೆಲಸಗಾರರಿಗೆ ಓಟು ಕೊಡಲು ಹೋದಾಗ ನಷ್ಟವಾದ ಸಮಯದ ಬಗ್ಗೆ ಸಂಬಳ ಕಡಿಯುವುದಿಲ್ಲ. ಇಲೆಕ್ಷನ್ ದಿನಕ್ಕೆ ಕೆಲವು ದಿನಗಳ ಮುಂಚಿತವಾಗಿ ರೇಡಿಯೋ ವೃತ್ತ ಪತ್ರಿಕೆ ಮತ್ತು ಇತರ ಸಾರ್ವಜನಿಕ ಸಂಸ್ಥೆಗಳು ಓಟಿನ ಕುರಿತು ಪ್ರಚಾರ ಮಾಡಿಸುತ್ತವೆ.

ಪ್ರತಿಯೊಂದು ಸಂಸ್ಥಾನ ತನ್ನ ಸ್ವಂತ ಇಲೆಕ್ಷನ್ ಖಾನೂನುಗಳನ್ನು ಮತ್ತು ನಿಯಮಾವಳಿಯನ್ನು ರಚಿಸಿಕೊಳ್ಳುತ್ತದೆ. ಇದು ಸಂಯುಕ್ತ ಅಮೇರೀಕದ ರಾಜಶಾಸನದ ಸೂತ್ರಗಳಿಗೆ ಅನ್ವಯವಾಗಿರತಕ್ಕದ್ದು. ಜಾತಿ, ಮತ, ವರ್ಣಗಳ ಭೇದದ ಮೇಲೆ ಮತ ಕೊಡುವ ಹಕ್ಕನ್ನು ಯಾರಿಗೂ ಅಲ್ಲಗಳೆಯಲಾಗುವುದಿಲ್ಲ. ಜೊರ್ಜಿಯಾ ಸಂಸ್ಥಾನ ಒಂದು ಬಿಟ್ಟು ಮಿಕ್ಕ ಎಲ್ಲಾ ಸಂಸ್ಥಾನಗಳಲ್ಲಿ ಓಟರನು 21 ವರ್ಷಕ್ಕೆ ಮೇಲ್ಪಟ್ಟವನಿರಬೇಕು.

ಮುಂಚಿತವಾಗಿ ತಮ್ಮ ಹೆಸರು ರಿಜಿಸ್ಟರ್ ಮಾಡಿದವರು ಮಾತ್ರ ಓಟು ಕೊಡಬಹುದು. ಕೆಲವು ಸಂಸ್ಥಾನಗಳಲ್ಲಿವಾರ್ಷಿಕ ರಿಜಿಸ್ಟ್ರೇಶನ್ ಪದ್ಧತಿ ವಾಡಿಕೆಯಲ್ಲಿದೆ; ಉಳಿದವುಗಳಲ್ಲಿ ಕಾಯಂ ರಿಜಿಸ್ಟ್ರೇಶನ್ ಪಟ್ಟಿಗಳಿವೆ. ವರ್ಷಾವಧಿ ಹೊಸ ಓಟರರ ಹೆಸರುಗಳನ್ನು ಅವುಗಳಿಗೆ ಸೇರಿಸಲಾಗುತ್ತದೆ. ಒಬ್ಬ ಓಟರನು ಒಂದು ಸಂಸ್ಥಾನ ಬಿಟ್ಟು ಮತ್ತೊಂದು ಸಂಸ್ಥಾನಕ್ಕೆ ಹೋಗಿ ವಾಸಿಸಿದರೆ ದಾದರೆ ಅವನ ತನ್ನ ಹೆಸರನ್ನು ಅಲ್ಲಿ ರಿಜಿಸ್ಟರ್ ಮಾಡಿಸಬಹುದು. ಇಲೆಕ್ಷನ್ ಸೂತ್ರಗಳಿಗನ್ವಯವಾಗಿ ನಡೆಯುವ ಯಾವುದೇ ಓಟರನಿಗೆ ಅವನು ಮತ್ತೊಂದು ಸಂಸ್ಥಾನದವನೆಂಬ ಮಾತ್ರಕ್ಕೆ ಓಟಿಂಗ್ ಹಕ್ಕು ಅಲ್ಲಗಳೆಯುವ ಅಧಿಕಾರ ಯಾವ ಸಂಸ್ಥಾನಕ್ಕೂ ಇರುವುದಿಲ್ಲ. ಇಲೆಕ್ಷನ್ ದಿನ ಕಾರಣಾಂತರದಿಂದ ಸಂಸ್ಥಾನ ಬಿಟ್ಟು ಹೊರಗೆ ಹೋದ ಓಟರರಿಗೆ ಟಪ್ಪಾಲು ಮೂಲಕ ಓಟು ಕಳುಹಿಸುವ ಹಕ್ಕೂ ಇವೆ. ತೊಡಕಿಲ್ಲದೆ ನಾಜೂಕಾಗಿ, ಅತ್ಯಲ್ಪ ಶ್ರಮದೊಳಗೆ ಅತ್ಯಪಾರ ಸಂಖ್ಯೆ ಇಲೆಕ್ಷನ್‌ದಲ್ಲಿ ಭಾಗ ವಹಿಸಬೇಕೆಂಬುವುದೇ ಪ್ರತಿಯೊಂದು ಸಂಸ್ಥಾನದ ಬಯಕೆ.

ಶ್ವಾನಗಳ ವಿಶ್ವವಿದ್ಯಾಲಯ!

ಭಾರತ ದೇಶದ ನಾಗರೀಕರು ಸಾಕಷ್ಟು ಶಿಕ್ಷಣ ಪಡೆಯಲು ಅವಕಾಶವಿಲ್ಲದೆ ಅನಾಗರೀಕತೆಯಲ್ಲಿ ನರಳುತ್ತಿರುವದಾದರೆ ಅಮೇರಿಕದಲ್ಲಿ ನಾಯಿಗಳಿಗೂ ಶಿಕ್ಷಣ ದೊರೆಯುತ್ತದೆ. ಅವುಗಳಿಗಾಗಿ ಪ್ರತ್ಯೇಕ ವಿಶ್ವವಿದ್ಯಾಲಯವೊಂದಿದೆ. ಇಂಥಾ ಯುನಿವರ್ಸಿಟಿಯು ಅಮೇರಿಕದಲ್ಲಿ ಮೊದಲನೆಯದಾಗಿ ಸ್ಥಾಪನೆಯಾಗಿರುವುದಾಗಿದೆ. ಈ ವಿಶ್ವವಿದ್ಯಾಲಯದಲ್ಲಿ ನಾಯಿಗಳು ಪದವಿ ನಡೆಯುತ್ತವೆ. ಮೂಕ ಪ್ರಾಣಿಗಳ ಪೋಲಿನ ಕ್ರೂರತೆ ನಿವಾರಣೆಯಾಗಬೇಕೆಂದು ಶ್ರಮ ಪಡುವ ವಾರನ್ ಮೆಕ್ ಸ್ಪೆಡನ್ ಎಂಬವನು ಈ ವಿಶ್ವವಿದ್ಯಾಲಯವನ್ನು ನಡೆಸುತ್ತಿದ್ದಾನೆ.

ಯುನಿವರ್ಸಿಟಿಯು ಈಗ ತಾನೇ ಆರಂಭಿಸಲ್ಪಟ್ಟಿದೆ. ಪ್ರಸ್ತುತ ಅಲ್ಲಿ ಸುಮಾರು 60 ನಾಯಿಗಳು ಇವೆ. ಎಲ್ಲವೂ ಒಂದು ವರ್ಷ ಪ್ರಾಯದೊಳಗಿನವು. ಈ ನಾಯಿಗಳ ಮೂಲಕರೆಲ್ಲರೂ ಹದಿನೆಂಟು ವರ್ಷಗಳಿಗೆ ಮೇಲ್ಪಟ್ಟವರಿರುತ್ತಾರೆ.

ಹತ್ತು ವಾರದ ಒಂದು ಟರ್ಮಿಗೆ ಒಂದು ನಾಯಿಗೆ ಒಂದು ಪವನು ಸಂಬಳ—ಪ್ರತಿಯೊರೆದು ವಾರ ಕನಿಷ್ಟ ಪಕ್ಷಕ್ಕೆ ಎರಡು ತಾಸಿನಷ್ಟಾದರೂ ಪ್ರತಿಯೊಂದು ನಾಯಿ ಕ್ಲಾಸುಗಳಿಗೆ ಹಾಜರಾಗಬೇಕು. 'ಕುಳಿತುಕೋ, ಪಾದಗಳ ಮೇಲೆ ನಿಲ್ಲು, ಬಾ, ಮಲಗು, ಬೊಗಳು, ಬಾಯ್ಮುಚ್ಚು' ಎಂಬಿತ್ಯಾದಿ ಆಜ್ಞೆಗಳನ್ನು ಪಾಲಿಸುವುದೇ ಈ ವಿಶ್ವವಿದ್ಯಾಲಯದಲ್ಲಿ ಕಲಿಸುವ ಪಠಿತ ಪಟ್ಟಿ.

ಉಚ್ಚ ಶಿಕ್ಷಣ ಪಡೆದ ನಾಯಿಗೆ C. D. (Companion Dog) ಎಂಬ ಪದವಿ ಸಿಗುತ್ತದೆ. ನಮ್ಮ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಬಿ. ಎ. ಪದವಿ ಪಡೆಯುವುದಿಲ್ಲವೇ—ಅದಕ್ಕೆ ಸರಿಸಮಾನ ಈ ಸಿ. ಡಿ. ಈ ಪದವಿಗಿಂತ ಇನ್ನಷ್ಟು ಮೇಲಿನ ಪದವಿ ಎಂದರೆ C. D. Ex. (Companinion Dog Excellent) ಇದು ಸರ್ವ ಸಾಮಾನ್ಯ ನಮ್ಮಲ್ಲಿಯ M. A. ಮಟ್ಟದ್ದು. ಅತ್ಯುತ್ಕೃಷ್ಟ ಶ್ರೇಣಿ ಎಂದರೆ U. D. (Unity Dog) ನಮ್ಮ ಶಿಕ್ಷಣ ಕ್ರಮದಲ್ಲಿ ಡಾಕ್ಟರ್ ಆಫ್ ಫಿಲಾಸಫಿ ಬಿರುದು ಪಡೆದವರಿಗೆ ಎಷ್ಟು ಮಾನ್ಯತೆ ದೊರೆಯುತ್ತದೋ ಅಷ್ಟೇ ಮಾನ್ಯತೆ ನಾಯಿಗಳ ಸಾಮ್ರಾಜ್ಯದಲ್ಲಿಯು U. D. ಪದವೀಧರ ನಾಯಿಗಳಿಗೆ ದೊರೆಯುತ್ತದೆ.

ನಾಯಿಗಳ ವಿಶ್ವವಿದ್ಯಾಲಯದಲ್ಲಿ ಹಗಲಿರುಳು ದುಡಿಯುತ್ತಿರುವ ಮೆಕ್ ಸ್ಪೆಡನ್‌ರವರ ಅನುಭವದ ಮಾತೇನೆಂದರೆ—'ಚಿಕ್ಕ ಮರಿಗಳಿಗಿಂತ ದೊಡ್ಡ ನಾಯಿಗಳು ಬೇಗನೇ ಪಾಠಗಳನ್ನು ಕಲಿಯುತ್ತವೆ. ನಮ್ಮ ವಿಶ್ವವಿದ್ಯಾಲಯದಲ್ಲಿ ಸೇರಿದ ಒಂದು ನಾಯಿ ಹನ್ನೊಂದು ವರ್ಷ ಪ್ರಾಯದ್ದಿದೆ. ಅದು ಉಳಿದ ಎಲ್ಲಾ ನಾಯಿಗಳಿಗಿಂತ ಚುರುಕಾಗಿದೆ.' ('ನ. ಭಾ.')